# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:03/08/2016

ಪ್ರಕರಣ ಸಂಖ್ಯೆ: ಆರ್‌ಎ 04/2013-14

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ನಾರಾಯಣಪ್ಪ<br>ಬಿನ್ ವೆಂಕಟಪ್ಪ<br>ಚಿನ್ನಾಪುರ ಗ್ರಾಮ,<br>ಕಸಬಾ ಹೋಬಳಿ,<br>ಕೋಲಾರ ತಾಲ್ಲೂಕು<br>(ಶ್ರೀ ಬಿ.ಮರಿರೆಡ್ಡಿ<br>– ವಕೀಲರು, ರವರಿಂದ ) | | 1. ಟಿ.ಮುನಿಯಪ್ಪ<br>ಬಿನ್ ಬುಕ್ಕಪ್ಪ<br>ಚಿನ್ನಾಪುರ ಗ್ರಾಮ,<br>ಕಸಬಾ ಹೋಬಳಿ,<br>ಕೋಲಾರ ತಾಲ್ಲೂಕು.<br>2. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ.<br>3. ತಹಶೀಲ್ದಾರ್<br>ಕೋಲಾರ ತಾಲ್ಲೂಕು.<br>(ಶ್ರೀ ಟಿ.ವೆಂಕಟರೆಡ್ಡಿ<br>– ವಕೀಲರು, ರವರಿಂದ ) |

ವಿಷಯ: ಸಹಾಯಕ ಕಮೀಷನರ್, ಕೋಲಾರ ಉಪ ವಿಭಾಗ ರವರ ನಂ.ಆರ್.ಎ. 436/2009-10 ದಿನಾಂಕ: 14/12/2012 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136(3) ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಚಿನ್ನಾಪುರ ಗ್ರಾಮದ ಸ.ನಂ. 13/1 ರಲ್ಲಿನ 2-01 ಎಕರೆ ಜಮೀನಿಗೆ ಸಂಬಂದಿಸಿದ ತಹಶೀಲ್ದಾರ್, ಕೋಲಾರ ತಾಲ್ಲೂಕು ರವರ ಆದೇಶ ಸಂಖ್ಯೆ ಆರ್.ಆರ್.ಟಿ.ಡಿಸ್.03/2005-06 ದಿನಾಂಕ 07/01/2010 ನ್ನು ಪ್ರಶ್ನಿಸಿ ಟಿ.ಮುನಿಯಪ್ಪ ಬಿನ್ ಲೇಟ್ ಬುಕ್ಕಪ್ಪ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ: ಆರ್‌ಎ.436/2009-10 ರಂತೆ ದಿನಾಂಕ:14/12/2012 ರಂದು ಹೊರಡಿಸಿದ ಆದೇಶದಲ್ಲಿ ಪ್ರಶ್ನಿತ ಆದೇಶವನ್ನು ಪದ್ದುಪಡಿಸಿ, ಉಭಯತ್ರರೂ ಪ್ರಶ್ನಿತ ಜಮೀನಿನ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಲು ಆದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಲಾಯ್ತು.

...2

ದಿನಾಂಕ:28/08/2013 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಉಭಯತ್ರರೂ ಹಜರು ಪ್ರಕರಣವನ್ನು ಮುಂದೂಡಲಾಯ್ತು. ದಿನಾಂಕ 02/07/2014 ರಂದು ಎದುರುದಾರರ ವಕೀಲರು ಹಾಜರು ಪ್ರಕರಣವನ್ನು ಆದೇಶಕ್ಕೆ ಕಾದಿರಿಸಲಾಯ್ತು. ಹಿಂದಿನ ಪೀಠಾಧಿಕಾರಿಗಳು ಆದೇಶ ಹೊರಡಿಸದ ಕಾರಣ ಪ್ರಕರಣವನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳಲಾಯ್ತು. ದಿನಾಂಕ:06/05/2015 ರಂದು ಉಭಯತ್ರರೂ ಹಜರು ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಗಿತ್ತು.

ಮೇಲ್ಮನವಿದಾರರ ಪರವಾಗಿ ಮಂಡಿಸಲಾದ ಮೇಲ್ಮನವಿ ಹಾಗೂ ವಾದದಲ್ಲಿ ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಚಿನ್ನಾಪುರ ಗ್ರಾಮದ ಸ.ನಂ. 13/1 ರಲ್ಲಿನ 2-01 ಎಕರೆ ಜಮೀನು ಮೂಲತಃ ಪಿಲ್ಲಪ್ಪ ನವರದ್ದಾಗಿದ್ದು, ಇವರು ಸದರಿ ಜಮೀನನ್ನು ಮುನಿಶಾಮಪ್ಪ @ ಕುರ್ರೆಣ್ಣ ಬಿನ್ ಗಡ್ಡ ದಾಸನಹಳ್ಳಿ ಗುಲೆಪ್ಪ ರವರಿಂದ ದಿನಾಂಕ 13/04/1942 ರಂದು ಕ್ರಯಕ್ಕೆ ಪಡೆದಿರುತ್ತಾರೆ. ನಂತರ ಸದರಿ ಜಮೀನನ್ನು ಪಿಲ್ಲಪ್ಪ ಹಾಗೂ ಇವರ ಸಹೋದರರಾದ ಗುಜ್ಜಪ್ಪ ಮತ್ತು ಗಾಣಪ್ಪ ರವರು ತಲಾ 0-27 ಗುಂಟೆಯಂತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಪಿಲ್ಲಪ್ಪ ರವರಿಗೆ ಐದು ಜನ ಹೆಣ್ಣು ಮಕ್ಕಳು ಮಾತ್ರ ಇದ್ದು ಒಂದನೇ ಎದುರುದಾರರು ಇವರ ಮೊದಲನೇ ಮಗಳು ನಾರಾಯಣಮ್ಮ ನವರ ಮಗನಾಗಿರುತ್ತಾರೆ. ಪಿಲ್ಲಪ್ಪ ನವರು ದಿನಾಂಕ 06/05/1963 ರಂದು ಮಾಡಿ ನೋಂದಾಯಿತ ವ್ಯವಸ್ಥಾ ಪತ್ರದಲ್ಲಿ 1 ನೇ ಎದುರುದಾರರಿಗೆ ಚಿನ್ನಾಪುರ ಗ್ರಾಮದ ಸ.ನಂ. 54/2 ರಲ್ಲಿ 0-22 ಗುಂಟೆ ಹಾಗೂ ವದಲವಾಡಿ ಗ್ರಾಮ ಸ.ನಂ. 22/2 ರಲ್ಲಿ 0-39 ಗುಂಟೆ ಮಾತ್ರ ಬರೆದುಕೊಟ್ಟಿರುತ್ತಾರೆ. ನಂತರ ಮೇಲ್ಮನವಿದಾರರ ತಂದೆ ದೊಡ್ಡವೆಂಕಟಪ್ಪ ರವರಿಗೆ ವಿವಾದಿತ ಸ.ನಂ.13/1 ರ ಪೈಕಿ 0-27 ಗುಂಟೆ ಜಮೀನನ್ನು ಪಿಲ್ಲಪ್ಪನವರ ಹೆಂಡತಿ ಗುಳ್ಳಮ್ಮ ಮತ್ತು ನಾರಾಯಣಸ್ವಾಮಿ ರವರು ದಿನಾಂಕ 09/10/1968 ರಂದು ನೋಂದಾಯಿತ ಹಕ್ಕುಬಿಡುಗಡೆ ಮಾಡಿಕೊಟ್ಟಿರುತ್ತಾರೆ. ಆದ್ದರಿಂದ ಮೇಲ್ಮನವಿದಾರರು ಸದರಿ 0-27 ಗುಂಟೆ ವಿಸ್ತೀರ್ಣ ಹಾಗೂ ಇವರ ತಾತನವರಾದ ಗಾಣಪ್ಪ ನವರ ಹಿಸ್ಸೆ 0-27 ಗುಂಟೆ ವಿಸ್ತೀರ್ಣದ ಜಮೀನು ಸೇರಿ ಒಟ್ಟು 1-14 ಎಕರೆಗೆ ಹಕ್ಕುದಾರರಾಗಿರುತ್ತಾರೆ ಎಂದು ವಾದಿಸಿರುತ್ತಾರೆ. 1 ನೇ ಎದುರುದಾರರು ವಿವಾದಿತ ಜಮೀನಿನಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ 0-30 ಗುಂಟೆ ಜಮೀನನ್ನು ಶ್ರೀನಿವಾಸ ರವರಿಗೆ ದಿನಾಂಕ 21/08/1985 ರಂದು ಮಾರಾಟಮಾಡಿರುತ್ತಾರೆ ಎಂದು ವಾದಿಸಿರುತ್ತಾರೆ. ಮುಂದುವರೆದು ಉಳಿದ ಗುಜ್ಜಪ್ಪ ನವರ ಭಾಗದ 0-27 ಗುಂಟೆ ಜಮೀನು ಇವರ ಮಗಳಾದ ಕೊಂಡಿಯಮ್ಮ ರವರು ಧಾನದ ಮೂಲಕ ಪಡೆದಿರುತ್ತಾರೆ ಎಂದು ವಾದಿಸಿ, ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸುವ ಮೂಲಕ ಸಹಾಯಕ ಕಮೀಷನರ್ ರವರು ಹೊರಡಿಸಿರುವ ಪ್ರಶ್ನಿತ ಆದೇಶವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

ಮೊದಲನೇ ಎದುರುದಾರರು ಸಹಾಯಕ ಕಮೀಷನರ್ ರವರ ನ್ಯಾಯಾಲಯದಲ್ಲಿ ಸಲ್ಲಿಸಿರುವ ಲಿಖಿತ ವಾದವನ್ನೇ ಪರಿಗಣಿಸಲು ಕೋರಿರುತ್ತಾರೆ. ಅದರಂತೆ ಕೆಲ ನ್ಯಾಯಾಲಯದ ಕಡತದಲ್ಲಿರುವ 1 ನೇ ಎದುರುದಾರರ ಲಿಖಿತ ವಾದವನ್ನು ಪರಿಶಿಲಿಸಲಾಗಿ, ಇದರಲ್ಲಿ ವಿವಾದಿತ ಸ.ನಂ. 13/1 ರಲ್ಲಿನ 2-01 ಎಕರೆ ಜಮೀನು ಈರಪ್ಪನ ಮಗ ಪಿಳ್ಳಪ್ಪ ನವರಿಗೆ ಸೇರಿದ್ದು, ಇದನ್ನು ದಿನಾಂಕ 13/04/1942 ರಂದು ಮುನಿಸ್ವಾಮಿ ಎಂಬುವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಪಿಳ್ಳಪ್ಪ ರವರಿಗೆ ಐದು ಜನ ಹೆಣ್ಣು ಮಕ್ಕಳು ಇದ್ದು, ಗಂಡು ಸಂತತಿ ಇರುವುದಿಲ್ಲ. ಮೊದಲನೇ ಮಗಳ ಮಗನಾಗಿರುವ 1 ನೇ ಎದುರುದಾರರು ಪಿಳ್ಳಪ್ಪ ನವರ ಆಶ್ರಯದಲ್ಲಿ ಬೆಳೆದಿರುತ್ತಾರೆ ಎಂದು ವಾದಿಸಿರುತ್ತಾರೆ. ಪಿಳ್ಳಪ್ಪ ನವರ ಪವತಿ ನಂತರ ವಿವಾದಿತ ಸ.ನಂ. 13/1 ರಲ್ಲಿನ 2-01 ಎಕರೆ, ಸ.ನಂ.67/2 ರಲ್ಲಿ 0-06 ಗುಂಟೆ ಹಾಗೂ ಸ.ನಂ. 62 ರಲ್ಲಿ 0-09 ಗುಂಟೆ ಜಮೀನು ಪವತಿವಾಸ್ತು ಮೂಲಕ ನಂ. ಐ.ಹೆಚ್.ಆರ್.29/68-69 ರಂತೆ 1ನೇ ಎದುರುದಾರರಿಗೆ ಖಾತೆ ಆಗಿರುತ್ತದೆ. ನಂತರ ವಿವಾದಿತ ಸ.ನಂ.13/1 ರಲ್ಲಿನ 2-01 ಎಕರೆ ಪೈಕಿ 0-30 ಗುಂಟೆ ಜಮೀನು ಎನ್.ಶ್ರೀನಿವಾಸ್ ರವರಿಗೆ ಮಾರಾಟ ಮಾಡಿರುವುದಾಗಿ ವಾದಿಸಿರುತ್ತಾರೆ. ಪಹಣಿಯಲ್ಲಿ ನಾರಾಯಣಪ್ಪ, ಗುರುವ, ಗಣಪ್ಪ ಹಾಗೂ ಕೋಡಿಯಮ್ಮ ರವರ ಹೆಸರುಗಳನ್ನು ಯಾವುದೇ ಆಧಾರವಿಲ್ಲದೇ ಹಾಗೂ ಪಿಳ್ಳಪ್ಪನ ವಾರಸುದಾರರಲ್ಲದಿದ್ದರೂ ನಮೂದಿಸಲಾಗಿರುತ್ತೆ. ಈ ಕಾರಣದಿಂದ ಸಹಾಯಕ ಕಮೀಷನರ್ ರವರು ಈ ಹಿಂದೆ ಪ್ರಕರಣ ಸಂಖ್ಯೆ: ಆರ್.ಎ.60/99-2000 ರಲ್ಲಿ ತಮ್ಮ ಪರವಾಗಿ ಆದೇಶಿಸಿರುತ್ತಾರೆ ಎಂದು ವಾದಿಸಿರುತ್ತಾರೆ. ಗುಳ್ಳಮ್ಮ ರವರು ಹಕ್ಕ ಬಿಡುಗಡೆ ಮಾಡಿದ ಕಾಲಕ್ಕೆ ಅವರ ಹೆಸರಿನಲ್ಲಿ ಖಾತೆ ಇಲ್ಲದೆ

...3

ಹಾಗೂ ಪತ್ರವು ನೋಂದಾಯಿತ ಪತ್ರವಾಗಿಲ್ಲವಾದ್ದರಿಂದ ಇದಕ್ಕೆ ಕಾನೂನಿನಲ್ಲಿ ಯಾವುದೇ ಮಹತ್ವ ಇರುವುದಿಲ್ಲ ಎಂದು ವಾದಿಸಿರುತ್ತಾರೆ. ಸದರಿ ವಿಷಯವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಸಹಾಯಕ ಕಮೀಷನರ್ ರವರು ಹೊರಡಿಸಿರುವ ಪ್ರಶ್ನಿತ ಆದೇಶ ಕ್ರಮಬದ್ಧವಾಗಿರುವುದರಿಂದ ಮೇಲ್ಮನವಿ ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿರುತ್ತಾರೆ.

ಉಭಯತ್ರರ ವಾದ, ಕೆಳ ನ್ಯಾಯಾಲಯದ ಆದೇಶ ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಚಿನ್ನಾಪುರ ಗ್ರಾಮದ ಸ.ನಂ. 13/1 ರಲ್ಲಿನ 2-01 ಎಕರೆ ಜಮೀನು ಮೂಲತಃ ಪಿಳ್ಳಪ್ಪ ಎಂಬುವರಿಗೆ ಕ್ರಯದ ಮೂಲಕ ಬಂದಿರುವುದಾಗಿ ಇಂಡೆಕ್ಸ್ ಆಫ್ ಲ್ಯಾಂಡ್‌ನಿಂದ ಕಂಡುಬರುತ್ತದೆ. ನಂತರ ಟಿ.ಮುನಿಯಪ್ಪ ರವರಿಗೆ ಫವತಿ ವಾರಸು ಮೇರೆಗೆ ಎಂದು ನಮೂದಾಗಿರುತ್ತದೆ. 1965-66 ನಿಂದ 1974-75 ನೇ ಸಾಲಿನ ಫಹಣಿಯಲ್ಲಿ ಪಿಳ್ಳಗ, ನಾರಾಯಣಪ್ಪ ರವರಿಗೆ 0-27 ಗುಂಟೆ, ಗುರವ ರವರಿಗೆ 0-27 ಗುಂಟೆ ಮತ್ತು ಗಾಣ ರವರಿಗೆ 0-27 ಗುಂಟೆ ನಮೂದಾಗಿರುತ್ತದೆ. ನೋಂದಾಯಿತ ವ್ಯವಸ್ಥಾ ಪತ್ರದ ಸಂಖ್ಯೆ:539/63-64 ದಿನಾಂಕ: 06/05/1963 ರಲ್ಲಿ ಪಿಳ್ಳಪ್ಪನವರು ತಮ್ಮ ಎಲ್ಲಾ ಜಮೀನುಗಳನ್ನು ತಮಗೆ ಗಂಡು ಸಂತತಿ ಇಲ್ಲದ ಕಾರಣ ಹೆಣ್ಣು ಮಕ್ಕಳ ಮಕ್ಕಳಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರದಲ್ಲಿ 1ನೇ ಎದುರುದಾರರಿಗೆ ಚಿನ್ನಾಪುರ ಗ್ರಾಮದ ಸ.ನಂ. 24/2 ರಲ್ಲಿ 0-22 ಗುಂಟೆ ಜಮೀನು ಹಾಗೂ ಹೊದಲವಾಡಿ ಗ್ರಾಮದ ಸ.ನಂ. 22/2 ರಲ್ಲಿ 0-39 ಗುಂಟೆ ಜಮೀನನ್ನು ಹೊರತುಪಡಿಸಿ ಉಳಿದ ಜಮೀನಿನಲ್ಲಿ ಯಾವುದೇ ರೀತಿಯ ಹಕ್ಕು ವಗೈರೇ ಇರುವುದಿಲ್ಲ ಎಂದು ನಮೂದಿಸಿ ಬರೆದುಕೊಟ್ಟಿತ್ತಾರೆ. ಆದರೆ ಈ ಪತ್ರದಲ್ಲಿ ವಿವಾದಿತ ಸ.ನಂ. ನಮೂದಾಗಿರುವುದಿಲ್ಲ. ನಂತರ ನೋಂದಾಯಿತ ಹಕ್ಕು ಬಿಡುಗಡೆ ಪತ್ರದ ಸಂಖ್ಯೆ; 3088/68-69 ದಿನಾಂಕ;15/10/1968 ರಂತೆ ಪಿಳ್ಳಪ್ಪನ ಹೆಂಡತಿ ಕುಳ್ಳಮ್ಮ ಮತ್ತು ನಾರಾಯಣಪ್ಪನ ಮಗ ನಾರಾಯಣಸ್ವಾಮಿ ರವರು ಗಾಣಪ್ಪ ನವರ ಮಗ ದೊಡ್ಡವೆಂಕಟಪ್ಪನವರಿಗೆ ವಿವಾದಿತ ಜಮೀನು ಪಿಳ್ಳಪ್ಪ, ಗಾಣಪ್ಪ ಮತ್ತು ಗುಜ್ಜಪ್ಪ ಎಂಬುವರು ಅಣ್ಣ ತಮ್ಮಂದಿರಾಗಿ ಮೂಜುಬಾನೆ ವಿಭಾಗದಂತೆ ಬಂದಿರುವುದಾಗಿ ಸಮೂದಿಸಿ ಸ.ನಂ. 13/1 ರಲ್ಲಿ 0-27 ಗುಂಟೆ ಜಮೀನನ್ನು ಬರೆದುಕೊಟ್ಟಿರುತ್ತಾರೆ. ನಂತರ 1ನೇ ಎದುರುದಾರರು ಟಿ.ಮುನಿಯಪ್ಪ ರವರು ಎಂ.ಶ್ರೀನಿವಾಸ ಬಿನ್ ನಾರಾಯಣಪ್ಪ ರವರಿಗೆ ವಿವಾದಿತ ಸ.ನಂ. 13/1 ರ ಪೈಕಿ 0-30 ಗುಂಟೆ ಜಮೀನನ್ನು ಕ್ರಯದ ರಿ.ನಂ.1553/85-86 ದಿನಾಂಕ:21/08/1985 ರಂತೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯಂತೆ ಯಾವ ದಿಕ್ಕಿನಲ್ಲೂ ಟಿ.ಮುನಿಯಪ್ಪ ರವರಿಗೆ ಉಳಿಕೆ ಜಮೀನು ಇರುವ ಬಗ್ಗೆ ನಮೂದಿರುವುದಿಲ್ಲ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ 1ನೇ ಎದುರುದಾರರು ವಿವಾದಿತ ಸ.ನಂ. 13/1 ರಲ್ಲಿನ ಪೂರಾ 2-01 ಎಕರೆ ಜಮೀನಿಗೆ ಹಕ್ಕುದಾರರು ಎಂದು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಪಿಲ್ಲಪ್ಪ ನವರಿಂದ ಗಾಣಪ್ಪ ಮತ್ತು ಗುಜ್ಜಪ್ಪ ರವರಿಗೆ ವಿಭಾಗ ಆಗಿರುವ ಬಗ್ಗೆ ಮೇಲ್ಮನವಿದಾರರು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ವಿವಾದಿತ ಜಮೀನಿನಲ್ಲಿ ಆಗಿರುವ ನೋಂದಾಯಿತ ದಸ್ತಾವೇಜುಗಳನ್ನು ರದ್ದುಪಡಿಸುವ ಅಧಿಕಾರ ಈ ನ್ಯಾಯಾಲಯಕ್ಕೆ ಇರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸದೇ ಮಾಡಿರುವ ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ ರವರ ಪ್ರಶ್ನಿತ ಆದೇಶ ದುರ್ಬಲತೆಯಿಂದ ಕೂಡಿರುತ್ತದೆ.

## ಆದೇಶ

ಮೇಲ್ಮನವಿ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ. ಕೋಲಾರ ತಾಲ್ಲೂಕು, ಕಸಬಾ ಹೋಬಳಿ, ಚಿನ್ನಾಪುರ ಗ್ರಾಮದ ಸ.ನಂ. 13/1 ರಲ್ಲಿನ 0-27 ಗುಂಟೆ ಜಮೀನಿನ ನೋಂದಾಯಿತ ಹಕ್ಕು ಬಿಡುಗಡೆ ಪತ್ರದ ಸಂಖ್ಯೆ;3088/68-69 ದಿನಾಂಕ;15/10/1968 ರಂತೆ ಖಾತೆ ಮಾಡಲು ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ನಿರ್ದೇಶಿಸಿದೆ. ಉಳಿಕೆ ಜಮೀನಿನ ಬಗ್ಗೆ ಉಭಯತ್ರರು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರವನ್ನು ಪಡೆದು ಅದರಂತೆ ಖಾತೆ ಕೋರಲು ಸ್ವತಂತ್ರರು.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:03/08/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K.V. Shivakumar (signature)

ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ